

ಅತ್ಯಂತ ದುಬಾರಿಯಾಗಿವೆ. ಆದರೆ ಈ ವರ್ಷದಿಂದ ಬೆಲೆ ತಗ್ಗಿಸಿ ಎಂಡುರೆನ್ಸ್ ಮತ್ತು ಏರೊ ರೇಸಿಂಗ್ ಸೈಕಲ್‌ಗಳಿಗೂ ಹೈಡ್ರಾಲಿಕ್ ಬ್ರೇಕ್ ಸಿಸ್ಟಂಗಳನ್ನು ಅಳವಡಿಸಲು ಉತ್ಪಾದಕರು ಸಿದ್ಧತೆಗಳನ್ನು ನಡೆಸಿದ್ದಾರೆ.

ಸೈಕಲ್‌ಗಳ ಟೈರ್‌ಗಳು ಅಗಲವಾದಷ್ಟೂ ರೋಡ್ ಗ್ರಿಪ್ ಹೆಚ್ಚಾಗುತ್ತದೆ. ಸರಾಗ ಚಲನೆಯಿಂದ ಸಸ್ಪೆನ್ಷನ್ ಸಾಮರ್ಥ್ಯ ಕೂಡಾ ಬಲಗೊಳ್ಳುತ್ತದೆ. ಬೆಟ್ಟ ಗುಡ್ಡಗಳಲ್ಲಿ ಸೈಕಲ್ ಚಲಾಯಿಸಲೂ ಹೆಚ್ಚು ಸುಲಭವಾಗುತ್ತದೆ. ಈ ನಿಟ್ಟಿನಲ್ಲೂ ಸೈಕಲ್ ಉತ್ಪಾದಕರು ಕಾರ್ಯ ತತ್ಪರರಾಗಿದ್ದಾರೆ. 3ರಿಂದ ಮೂರೂವರೆ ಇಂಚಿನಷ್ಟು ಟೈರ್‌ಗಳ ಅಗಲವನ್ನು ಹೆಚ್ಚಿಸುವ ಪ್ರಯತ್ನಗಳೂ ನಡೆದಿವೆ.

ಸೈಕಲ್‌ಗಳ ತೂಕ ಕಡಿಮೆಯಾದಷ್ಟೂ ಸವಾರಿ ಸುಲಭ. ಒಂದು ಗ್ರಾಂ ತೂಕ ಕಡಿಮೆಯಾದರೂ ಸೈಕ್ಲಿಸ್ಟ್‌ಗಳಿಗೆ ಸಂತೋಷವೇ. ಈ ನಿಟ್ಟಿನಲ್ಲಿ ಕಾರ್ಬನ್ ಫ್ರೇಮ್‌ಗಳನ್ನು ಬಳಸುವ ತಂತ್ರಜ್ಞಾನದ ಬಗ್ಗೆ ಡಿಸೈನರ್‌ಗಳು ಮತ್ತು ಎಂಜಿನಿಯರರು ತೊಡಗಿಸಿಕೊಂಡಿದ್ದಾರೆ. ಕಾರ್ಬನ್ ಫ್ರೇಮ್ ಈಗಾಗಲೆ ಯೂರೋಪಿನ ದೇಶಗಳಲ್ಲಿ ಅತ್ಯಂತ ಜನಪ್ರಿಯವೂ ಆಗಿದೆ.

ಕಳೆದ ವರ್ಷ ಅಮೆರಿಕ ಮತ್ತು ಯೂರೋಪ್ ದೇಶಗಳಲ್ಲಿ ಇ–ಬೈಕ್‌ಗಳ ಮಾರಾಟ ಶೇಕಡಾ 50 ರಷ್ಟು ಹೆಚ್ಚಿರುವ ವರದಿಗಳಿವೆ. ಇ ಬೈಕ್ ಗಳಿಂದಾಗಿ ಸೈಕಲ್ ಜನಜೀವನದ ಪ್ರತಿದಿನದ ಸಂಗಾತಿ ಎನ್ನುವಂತಾಗಿದೆ. 1X12 ಗೇರ್‌ಗಳುಳ್ಳ ಸೈಕಲ್‌ಗಳನ್ನು ಮಾರುಕಟ್ಟೆಗೆ ತರುವ ಯತ್ನಗಳೂ ನಡೆದಿವೆ.

ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡ ಸೈಕಲ್‌ಗಳು ಜನಸಾಮಾನ್ಯರ ಮಟ್ಟಿಗೆ ದುಬಾರಿಯೇ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಪೆಟ್ರೋಲ್ ಬಳಸು ಮೋಟಾರ್‌ಬೈಕ್‌ಗಳಿಗಿಂತ ಈ ಅತ್ಯಾಧುನಿಕ ಸೈಕಲ್‌ಗಳನ್ನು ಹೆಚ್ಚು ಜನಪ್ರಿಯಗೊಳಿಸಲು ಸೈಕಲ್ ಉದ್ಯಮ ಪಣತೊಟ್ಟಿದೆ. ಈ ನಿಟ್ಟಿನಲ್ಲಿ ಅಮೆರಿಕದಲ್ಲಿ ಇತ್ತೀಚೆಗೆ ನಡೆದಿರುವ ಹೊಸ ವಿದ್ಯಮಾನವೆಂದರೆ, 'ಡೈರೆಕ್ಟ್ ಟು ಕನ್ಸೂಮರ್' ಎನ್ನುವ ಮಾರಾಟ ತಂತ್ರ. ಸೈಕಲ್‌ನ ಬಿಡಿ ಭಾಗಗಳನ್ನು ಪ್ರತ್ಯೇಕವಾಗಿ ಮಾರಾಟ ಮಾಡಿ, ಅವುಗಳನ್ನು ಹೇಗೆ ಜೋಡಿಸಬೇಕು ಎನ್ನುವುದನ್ನು ಗ್ರಾಹಕರಿಗೇ ಆನ್‌ಲೈನ್ ಮೂಲಕ ಕಲಿಸಿಕೊಡುವ ಪ್ರಯತ್ನವೇ ಈ ಡೈರೆಕ್ಟ್ ಟು ಕನ್ಸೂಮರ್ ಯೋಜನೆ. ಇಲ್ಲಿ ಮಧ್ಯವರ್ತಿ ಮಾರಾಟಗಾರರು ಇಲ್ಲವಾಗುತ್ತಾರೆ. ಆದರೆ ಸೈಕಲ್‌ಗಳು ಕಡಿಮೆ ಬೆಲೆಯಲ್ಲಿ ಗ್ರಾಹಕರಿಗೆ ದೊರಕುತ್ತವೆ.

ಒಟ್ಟಾರೆ ಜಗತ್ತಿನಾದ್ಯಂತ ಸೈಕಲ್‌ಗಳನ್ನು ಜನಪ್ರಿಯಗೊಳಿಸಲು ನೂರೆಂಟು ಯತ್ನಗಳು ನಡೆಯುತ್ತಿವೆ. ಬೆಂಗಳೂರಿನಂತಹ ನಗರದಲ್ಲಿ ಸೈಕಲ್ ಸವಾರರಿಗೆ ರಸ್ತೆ ಬದಿಯಲ್ಲಿ ಪ್ರತ್ಯೇಕ ಟ್ರ್ಯಾಕ್‌ಗಳನ್ನು ನಿರ್ಮಿಸುವ ಬಗ್ಗೆ ಚರ್ಚೆ ಸಾಕಷ್ಟು ಹಿಂದಿನಿಂದಲೂ ನಡೆದಿದೆ. ಹಂತ ಹಂತವಾಗಿ ಈ ಪ್ರತ್ಯೇಕ ಸೈಕಲ್ ಟ್ರ್ಯಾಕ್‌ಅನ್ನು ರೂಪಿಸುವ ನಿಟ್ಟಿನಲ್ಲಿ ಕೆಲಸ ಚುರುಕುಗೊಳ್ಳಬೇಕಿದೆ.

ಪರಿಸರ ಸ್ನೇಹಿ ಸಾರಿಗೆಯ ಕಲ್ಪನೆ ಇವತ್ತಿನ ಜೀವನಶೈಲಿಯ ಅನಿವಾರ್ಯತೆಯೂ ಹೌದು. ಸದೃಢ ದೇಹ, ಉತ್ತಮ ಆರೋಗ್ಯ, ಪರಿಸರ ಪ್ರೇಮಕ್ಕೆ ಸೈಕ್ಲಿಂಗ್ ಇನ್ನೊಂದು ಹೆಸರಾಗಿದೆ.

## ಕವಿ ಐರಸಂಗರ ಸೈಕಲ್ ಪ್ರೀತಿ



ಪರಿಸರ ಪ್ರೇಮದ ಬಗ್ಗೆ ನೂರಾರು ಕವಿಗಳು ಸಾಲು ಸಾಲು ಕವಿತೆಗಳನ್ನು ರಚಿಸಿದ್ದಾರೆ. ಆದರೆ ಧಾರವಾಡದ ಸರಳ ಕವಿಯೆಂದೇ ಹೆಸರಾಗಿರುವ ಡಾ.ವಿ.ಸಿ. ಐರಸಂಗ ಅವರು ತಮ್ಮ 85ರ ಹರೆಯದಲ್ಲಿಯೂ ಸೈಕಲ್ ಅನ್ನೇ ನೆಚ್ಚಿಕೊಂಡಿದ್ದಾರೆ. ತನ್ಮೂಲಕ ಪರಿಸರ ಪ್ರೇಮವನ್ನು ಬದುಕಿನಲ್ಲಿ ಅಳವಡಿಸಿಕೊಂಡಿದ್ದಾರೆ. ಬಾಲ್ಯದಿಂದಲೂ ಸೈಕಲ್ ಸಹವಾಸ ಅವರದ್ದು. ಹಲವು ಕವನ ಸಂಕಲನಗಳನ್ನು ರಚಿಸಿರುವ ಅವರು, ಅವುಗಳನ್ನು ಮುದ್ರಿಸಿ ಅತ್ಯಂತ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಾರೆ. ತಮ್ಮ ಸೈಕಲ್ ಮೇಲೆ ಮನೆ ಮನೆಗೆ ಹೋಗಿ ಪುಸ್ತಕದ ಪ್ರತಿಗಳನ್ನು ಆಸಕ್ತರಿಗೆ ನೀಡಿ ಬರುತ್ತಾರೆ. ಇತ್ತೀಚೆಗೆ ಅವರಿಗೆ 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ'ಯೂ ಒಲಿದಿದೆ.